International Journal of Kannada Research
www.kannadajournal.com

ISSN: 2454–5813
IJSR 2016; 2(3): 53-57
© 2016 IJKS
www.kannadajournal.com
Received: 01-05-2016
Accepted: 05-06-2016

**ಡಾ.ನೀಲಕಂಠಸ್ವಾಮಿ**
ಸಹಾಯಕ ಪ್ರಾಧ್ಯಾಪಕರು.
ಇತಿಹಾಸ ವಿಭಾಗ ಸರ್ಕಾರಿ
ಪ್ರಥಮ ದರ್ಜೆ ಕಾಲೇಜು
ಬನ್ನೂರು, ಕರ್ನಾಟಕ, ಭಾರತ

**Correspondence**
**ಡಾ.ನೀಲಕಂಠಸ್ವಾಮಿ**
ಸಹಾಯಕ ಪ್ರಾಧ್ಯಾಪಕರು.
ಇತಿಹಾಸ ವಿಭಾಗ ಸರ್ಕಾರಿ
ಪ್ರಥಮ ದರ್ಜೆ ಕಾಲೇಜು
ಬನ್ನೂರು, ಕರ್ನಾಟಕ, ಭಾರತ

# ಮೌಲೀಕೃತ ಶಿಕ್ಷಣ ಕ್ಷೇತ್ರದ ನೆಡೆಗೆ ಮೈಸೂರು ರಾಜಸಂತತಿ ಕೊಡುಗೆಗಳ–ಒಂದು ಅವಲೋಕನ

**ಡಾ.ನೀಲಕಂಠಸ್ವಾಮಿ**

**DOI:** https://doi.org/10.22271/24545813.2016.v2.i3a.1055

**ಪೀಠಿಕೆ**

ಮೈಸೂರು ರಾಜಮನೆತನವನ್ನು ಆಳಿದ ದೊರೆಗಳು ತಮ್ಮದೆ ಆದ ರೀತಿಯಲ್ಲಿ ಶಿಕ್ಷಣಕ್ಷೇತ್ರಕ್ಕೆ ಕೊಡುಗೆಯನ್ನು ನೀಡಿದ್ದಾರೆ. ಅದರಲ್ಲಿಯೂ ರಾಜಶ್ರೀ ಎಂದುಖ್ಯಾತಿಯನ್ನು ಪಡೆದಿರುವ ನಾಲ್ವಡಿ ಕೃಷ್ಣರಾಜ ಒಡೆಯರರವರು ಸುಮಾರು 38 ವರ್ಷಗಳ (1902–1940) ಆಳ್ವಕೆ ಮಾಡಿ ಮೈಸೂರು ರಾಜ್ಯದ ಇತಿಹಾಸವನ್ನು ಸುವರ್ಣಾಕ್ಷರಗಳಲ್ಲಿ ಕೆತ್ತಿಸಿದ್ದಾರೆ. ಇವರ ಕಾಲಘಟ್ಟದ ಇತಿಹಾಸವನ್ನು "ಆಡುಮುಟ್ಟದ ಸೊಪ್ಪಿಲ್ಲ" ಎಂಬ ನಾಣ್ಣುಡಿಗೆ ಮಹಾರಾಜದ ಆಡಳಿತದ ಪರಿಧಿಗೆ ಬಾರದ ಯಾವುದೇ ಒಂದು ವಿಷಯ ಇರುಲಿಲ್ಲ ಹೇಳುವಂತೆ ಇದೆ.

ಪ್ರಸ್ತುತ ಲೇಖನದ ವಿಷಯ ಶಿಕ್ಷಣ ಕ್ಷೇತ್ರಕ್ಕ ಸಂಬಂಧಿಸಿದಂತೆ ಹೇಳುವುದಾದರೆ ಮಹಾರಾಜರ ಕಾಲದಲ್ಲಿ ರಾಜ್ಯದಲ್ಲಿ ಶೈಕ್ಷಣಿಕ ಕ್ರಾಂತಿ ಉಂಟಾಯಿತು. ಶಿಕ್ಷಣ ನಾಲ್ವಡಿ ಕೃಷ್ಣರಾಜ ಒಡೆಯರ ಆದ್ಯತೆಯ ಕ್ಷೇತ್ರವಾಗಿತ್ತು. ಒಮ್ಮೆ ಅವರೇ ಹೇಳಿರುವಂತೆ ಒಚಿದು ದೇಶದ ಹಿಂದುಳಿದರೆ ಅದಕ್ಕೆ ಕಾರಣ ಅವಿದ್ಯಾವಂತೆ ಪ್ರಜೆಗಳು ಪ್ರಜ್ಞಾವಂತ ಪ್ರಜೆಗಳೇ ದೇಶದ ಆಸ್ತಿ. ಈ ಅಭಿಪ್ರಾಯದಲ್ಲಿ ಬಲವಾದ ನಂಬಿಕೆ ಹೊಂದಿದ್ದ ಮಹಾರಾಜರು ತಮ್ಮ ರಾಜ್ಯದ ಎಲ್ಲಾ ಪ್ರಜೆಗಳಿಗೂ ಶಿಕ್ಷಣ ಲಭಿಸಬೇಕೆಂಬ ಧ್ಯೇಯದಿಂದ ಆ ಕ್ಷೇತ್ರದ ಅಭಿವೃದ್ಧಿಗೆ ಶ್ರಮಿಸಿದರು.

1911 ರಲ್ಲಿ ಆರ್ಥಿಕ ಪರಿಷತ್ತನ್ನು ಉದ್ಘಾಟಿಸಿ ಮಾತನಾಡುತ್ತ "Education is the sovereign remedy for all our economic evils" ಎಂಬುದಾಗಿ ತಿಳಿಸಿದರು. ಅದಕ್ಕಾಗಿ ಸರ್ಕಾರ ಶಿಕ್ಷಣಕ್ಕೆ ಪ್ರಥಮ ಆದ್ಯತೆ ನೀಡಬೇಕಾದ ಅಗತ್ಯವನ್ನೂ, ಅನಿವಾರ್ಯತೆಯನ್ನೂ ಖಚಿತಪಡಿಸಿದರು. ಜಾತಿ, ವರ್ಗ, ಮತ, ಲಿಂಗ ಹಾಗೂ ಪ್ರಾದೇಶಿಕ ಬೇಧವಿಲ್ಲದ ಸಾರ್ವತ್ರಿಕ ಶಿಕ್ಷಣ ತಮ್ಮ ಎಲ್ಲಾ ಪ್ರಜೆಗಳಿಗೂ ಲಭ್ಯವಾಗಬೇಕೆಂಬ ಉದಾತ್ತ ಧ್ಯೇಯ ಇವರದಾಗಿತ್ತು. ಮಹಾರಾಜರ ಇಚ್ಛಾಶಕ್ತಿಗೆ ಅವರ ದಿವಾನರುಗಳು ಹಾಗೂ ಆಡಳಿತ ಯಂತ್ರದ ಸಂಬಂಧಪಟ್ಟ ಅಧಿಕಾರಿಗಳ ಕ್ರಿಯಾಶಕ್ತಿ ಕೈಜೋಡಿಸಿದ್ದರಿಂದ ಹಲವಾರು ಯೋಜನೆಗಳ ಮೂಲಕ ಸಾರ್ವತ್ರಿಕ ಹಾಗೂ ವೈವಿದ್ಯಮಯ ಶಿಕ್ಷಣ ವ್ಯವಸ್ಥೆಯನ್ನು ಅನುಷ್ಠಾನಕ್ಕೆ ತರಲು ಸಾಧ್ಯವಾಯಿತು. ಬಾಲ ಶಿಕ್ಷಣ ಕಿಂಡರ್ ಗಾರ್ಟನ್ ನಿಂದ ಹಿಡಿದು ಉನ್ನತ ಪದವಿ ಶಿಕ್ಷಣವೂ ಸೇರಿದಂತೆ ವೈವಿದ್ಯಕೀಯ ಹಾಗೂ ತಾಂತ್ರಿಕ ಶಿಕ್ಷಣವನ್ನೂ ಪ್ರಜೆಗಳಿಗೆ ದೊರಕಿಸಿದ್ದುದು ಅವರ ಮಹೋನ್ನತ ಸಾಧನೆ.

**ಶಿಕ್ಷಣ ಕ್ಷೇತ್ರ ಐತಿಹ್ಯ:**

ಮೈಸೂರು ರಾಜ್ಯ ಕಮಿಷನರುಗಳ ಆಳ್ವಿಕೆಗೆ ಒಳಪಟ್ಟ ಸಂದರ್ಭದಲ್ಲಿ ಕ್ರೈಸ್ತ ಮಿಷನರಿಗಳು ರಾಜ್ಯದಲ್ಲಿ ಶಿಕ್ಷಣ ಪ್ರಸಾರ ಕಾರ್ಯವನ್ನು ಆರಂಭಿಸಿದ್ದವು. 1881 ರಲ್ಲಿ ರಾಜಮನೆತನದ ಹತ್ತನೇ ಚಾಮರಾಜ ಒಡೆಯರ್ ರವರಿಗೆ ಅಧಿಕಾರವನ್ನು ವಹಿಸಿಕೊಟ್ಟ ನಂತರ ಮಹಾರಾಜರ ಸರ್ಕಾರ ಶಾಲೆಗಳ ಸ್ಥಾಪನೆಗೆ ಮುಂದಾಯಿತು. ಈ ಶಾಲೆಗಲು ಅಸ್ತಿತ್ವಕ್ಕೆ ಬಂದವಾದರೂ ಸರ್ಕಾರ ನಿಗದಿಪಡಿಸಿದ್ದ ಬೋಧನಾ ಶುಲ್ಕವನ್ನು ಪಾವತಿ ಮಾಡಲಾಗದ ಶೇಕಡ 90 ರಷ್ಟು ಮಕ್ಕಳು ಶಿಕ್ಷಣದಿಂದ ವಂಚಿತರಾದರು ಹಾಗೂ ಶಾಲೆಚುತ್ತ ಮುಖಮಾಡಲಿಲ್ಲ. ಹಾಗಾಗಿ ಇಪ್ಪತ್ತನೇ ಶತಮಾನದ ಆರಂಭದವರೆಗೂ ಸಾಮಾನು ವರ್ಗದ ಮಕ್ಕಳು ಶಿಕ್ಷಣದಿಂದ ದೂರವೇ ಉಳಿದರು. ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರು 1902 ರಲ್ಲಿ ರಾಜ್ಯಾಧಿಕಾರ ಸ್ವೀಕರಿಸಿದ ನಂತೆ ಪ್ರಾಥಮಿಕ ಶಿಕ್ಷಣ ಕ್ಷೇತ್ರ ಗಮನಾರ್ಹ

ಬದಲಾವಣೆಗಳಿಗೆ ಒಳಗಾಯಿತು. ಮಹಾರಾಜರು ಅಧಿಕಾರಕ್ಕೆ ಬಂದಕೂಡಲೆ ಸರ್ಕಾರಿ ಶಾಲೆಗಳಿದ್ದರೂ ತಮ್ಮ ಪ್ರಜೆಗಳಲ್ಲಿ ಬಹುತೇಕ ಮಕ್ಕಳು ಶಾಲೆಯಿಂದ ಹೊರಗುಳಿದಿರುವುದನ್ನು ಗಮನಿಸಿದರು. ಬೋಧನಾ ಶುಲ್ಕ ಕಡ್ಡಾಯವಾಗಿ ಪಾವತಿಸಬೇಕೇಗಿರುವುದೇ ಈ ಪರಿಸ್ಥಿತಿಗೆ ಕಾರಣವೆಂಬುದನ್ನು ಕಂಡುಕೊಂಡು 1907 ಅಕ್ಟೋಬರ್ ಸರ್ಕಾರದಿಂದ ಆದೇಶ ಒಂದನ್ನು ಹೊರಡಿಸಿದರು. ಆ ಪ್ರಕಾರ ಮೈಸೂರು ರಾಜ್ಯದ ಎಲ್ಲ ಗ್ರಾಮೀಣ ಪ್ರದೇಶಗಳ ಕಿರಿಯ ಮತ್ತು ಹಿರಿಯ ಪ್ರಾಥಮಿಕ ಶಾಲಾ ಮಕ್ಕಳ ಬೋಧನಾ ಶುಲ್ಕವನ್ನು ರದ್ದುಗೊಳಸಲಾಯಿತು ಗ್ರಾಮೀಣ ಪ್ರದೇಶದ ಪ್ರಾಥಮಿಕ ಶಾಲಾ ಮಕ್ಕಳಿಗೆ ಉಚಿತ ಶಿಕ್ಷಣ ನೀಡಲು ಯೋಚಿಸಿ ಕಾರ್ಯರೂಪಕ್ಕೆ ತಂದುದು ಮಹಾರಾಜರ ದೂರದರ್ಶಿತ್ವಕ್ಕೆ ಸಾಕ್ಷಿಯಾಗಿದೆ. ಆದರೂ ನಿರೀಕ್ಷಿತ ಮಟ್ಟದಲ್ಲಿ ಈ ಆದೇಶ ಫಲನೀಡಲಿಲ್ಲ. ಗ್ರಾಮೀಣ ಕುಟುಂಬಗಳು ತಮ್ಮ ಜೀವನ ನಿರ್ವಹಣೆಗೆ ತಮ್ಮೊಡನೆ ಮಕ್ಕಳನ್ನೂ ಕೂಡ ಕೂಲಿಗೆ ಕರೆದೊಯ್ಯುತ್ತಿದ್ದರು. ಈ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಸಾರ್ವತ್ರಿಕ ಶಿಕ್ಷಣ ನೀಡುವುದು ಸರ್ಕಾರಕ್ಕೆ ಒಚಿದು ಸವಾಲಾಗಿತ್ತು.

ಮಹಾರಾಜರು ರಾಜ್ಯದ ಸರ್ವಾಂಗೀಣ ಅಭಿವೃದ್ಧಿಗಾಗಿ ತೆರೆದ ಮನಸ್ಸಿನಿಂದ ದೇಶದ ಇತರ ದೇಶೀಯ ಸಂಸ್ಥಾನಗಳು ಹಾಗೂ ಬ್ರಿಟಿಷ್ ಪ್ರಾಂತಗಳಲ್ಲಿ ಆಗುತ್ತಿದ್ದ ಅಭಿವೃದ್ಧಿ ಕಾರ್ಯಗಳನ್ನು ಗಮನಿಸುತ್ತಿದ್ದರು. ಪ್ರಾಥಮಿಕ ಶಿಕ್ಷಣ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಬರೋಡ ರಾಜ್ಯದಲ್ಲಿ ಹೆಚ್ಚು ಪ್ರಗತಿ ಸಾಧಿಸಿದ್ದುದು ಮಹಾರಾಜರ ಗಮನಕ್ಕೆ ಬಂದಿತು. ಕೂಡಲೆ ಕಾರ್ಯ ಪ್ರವೃತ್ತರಾದ ಮಹಾರಾಜರು ಶಿಕ್ಷಣ ಇಲಾಖೆಯ ಇನ್‌ಸ್ಪೆಕ್ಟರ್ ಜನರಲ್ ಎಚ್.ಜೆ.ಭಾಭಾ ರವರು 1905-06 ರಲ್ಲಿ ಬರೋಡ ರಾಜ್ಯಕ್ಕೆ ಸರ್ಕಾರದ ವೆಚ್ಚದಲ್ಲಿ ನಿಯೋಜನೆ ಮಾಡಿದರು. ಭಾಭಾರವರು ಆ ರಾಜ್ಯದ ಶಿಕ್ಷಣ ಇಲಾಖೆಯ ರೀತಿ-ನೀತಿಗಳನ್ನು ಅಧ್ಯಯನ ಮಾಡಿ ಮಹಾರಾಜರಿಗೆ ವರದಿ ಸಲ್ಲಿಸಿದರು ಬರೋಡ ರಾಜ್ಯವು ಪ್ರಾಥಮಿಕ ಶಿಕ್ಷಣ ಕ್ಷೇತ್ರದಲ್ಲಿ ಮಾಡಿರುವ ಸಾಧನೆಯನ್ನು ಅರಿತು, ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ನಿರಂತರ ಚರ್ಚಿಸಿ, ಆ ರಾಜ್ಯದ ನೀತಿಗಳಲ್ಲಿ ರಾಜ್ಯದ ಪರಿಸರಕ್ಕೆ ಸೂಕ್ತವೆನಿಸಿದ ಕೆಲವು ಬದಲಾವಣೆಗಳೊಂದಿಗೆ ಇಲ್ಲೂ ಶಿಕ್ಷಣ ನೀತಿಯನ್ನು ಅನುಷ್ಠಾನಗೊಳಸಲು ಮಹಾರಾಜರ ಸರ್ಕಾರ ತೀರ್ಮಾನಿಸಿತು. ಪರಿಣಾಮವಾಗಿ 1913 ರಲ್ಲಿ " the mysore elementary education regulation" ಜಾರಿಗೆ ಬಂದಿತು. ಆ ಪ್ರಕಾರ 5 ವರ್ಷ 10 ತಿಂಗಳು ಹಾಗೂ 7 ವರ್ಷ ವಯೋಮಿತಿಯಲ್ಲಿರುವ ರಾಜ್ಯದ ಎಲ್ಲ ಗಂಡು ಮಕ್ಕಳಿಗೆ ಕಡ್ಡಾಯ ಹಾಗೂ ಉಚಿತ ಪ್ರಾಥಮಿಕ ಶಿಕ್ಷಣವನ್ನು ನೀಡಲು ಅವಕಾಶ ಕಲ್ಪಿಸಲಾಯಿತು. 1907 ರಲ್ಲಿ ಸರ್ಕಾರ ಗ್ರಾಮೀಣ ಪ್ರದೇಶದ ಮಕ್ಕಳಿಗೆ ಉಚಿತ ಶಿಕ್ಷಣ ಘೋಷಿಸಿದ್ದುದು ತಿಳಿದಿದೆ. ಆದರೆ ಈಗ ರಾಜ್ಯದ ಎಲ್ಲಾ ಮಕ್ಕಳಿಗೂ ಉಚಿತ ಶಿಕ್ಷಣದ ಜೊತೆಗೆ ಅದನ್ನು ಕಡ್ಡಾಯಗೊಳಿಸಿದುದು ಹೆಚ್ಚು ಪರಿಣಾಮಕಾರಿಯಾಯಿತು.

ಈ ಕಾಯಿದೆ ಜಾರಿಗೆ ಬಂದ ಮೊದಲ ವರ್ಷ ಪ್ರಾಯೋಗಿಕವಾಗಿ ಆಯ್ದ 15 ಕೇಂದ್ರಗಳಲ್ಲಿ ಕಡ್ಡಾಯ-ಉಚಿತ ಪ್ರಾಥಮಿಕ ಶಿಕ್ಷಣವನ್ನು ಅನುಷ್ಠಾನಗೊಳಸಲಾಯಿತು. ಈ ಕೇಂದ್ರಗಳಲ್ಲಿನ ಕಾರ್ಯ ವೈಖರಿಯನ್ನು ಪರಿಶೀಲಿಸಲು ಶಿಕ್ಷಣ ಇಲಾಖೆಯಿಂದ ಪರಿಶೀಲನಾ ಅಧಿಕಾರಿಗಳನ್ನು ನೇಮಿಸಲಾಯಿತು. ಈ ಅಧಿಕಾರಿಗಳು ಪ್ರಾಯೋಗಿಕ ಕೇಂದ್ರಗಳಿಗೆ ಅನಿರೀಕ್ಷಿತ ಭೇಟಿ ನೀಡಿ ಮಕ್ಕಳ ಹಾಜರಾತಿಯನ್ನು ಪಡೆಯುತ್ತಿದ್ದರು. ವರ್ಷದಿಂದ ವರ್ಷಕ್ಕೆ ಮಕ್ಕಳ ಹಾಜರಾಗಿಯಲ್ಲಿ ಸ್ಥಧಾರಣೆ ಕಂಡು ಬಂದು ಸರ್ಕಾರದ ಆಶಯಕ್ಕೆ ಉತ್ತಮ ಪ್ರತಿಕ್ರಿಯೆ ದೊರೆಯಿತು. ಆ ಹಿನ್ನೆಲೆಯಲ್ಲಿ 1921 ರಲ್ಲಿ ಕಡ್ಡಾಯ ಉಚಿತ ಶಿಕ್ಷಣವನ್ನು ರಾಜ್ಯದ 240 ಕೇಂದ್ರಗಳಿಗೂ, 1926 ರ ವೇಳೆಗೆ ಇಡೀ ರಾಜ್ಯದ ನಗರಗಳು, ಪಟ್ಟಣಗಳು ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ವಿಸ್ತರಿಸಲಾಯಿತು. ಮುಂದುವರಿದು ಅನುದಾನಿತ ಪ್ರಾಥಮಿತ ಶಾಲಾ ಮಕ್ಕಳಿಗೂ ಉಚಿತ ಶಿಕ್ಷಣದ ಸೌಲಭ್ಯವನ್ನು ವಿಸ್ತರಿಸಿದುದು ಈ ಹಂತದ ಶಿಕ್ಷಣದಲ್ಲಿ ಹೆಚ್ಚು ಒಲವು ಮೂಡಿಸಲು ಕಾರಣವಾಯಿತು. ಮಹಾರಾಜರ ಸರ್ಕಾರ ವರ್ಷದಿಂದ ವರ್ಷಕ್ಕೆ ಪ್ರಾಥಮಿಕ ಶಾಲೆಗೆ ಪ್ರವೇಶ ಪಡೆಯುತ್ತಿದ್ದ ಮಕ್ಕಳ ಸಂಖ್ಯೆ ಹೆಚ್ಚಳವಾಗುತ್ತಿದ್ದಂತೆ, ಸರ್ಕಾರಿ ಶಾಲೆಗಳನ್ನು ತೆರೆಯುವ ಸಂಖ್ಯೆಯನ್ನು ಹೆಚ್ಚಿಸಿತು.

ಪ್ರಾಥಮಿತ ಶಿಕ್ಷಣ ಎಲ್ಲ ಜಾತಿ-ವರ್ಗಗಳ ಮಕ್ಕಳಿಗೂ ದೊರಕುವಂತಾಗಬೇಕೆಂಬುದು ಮಹಾರಾಜರ ಆಶಯವಾಗಿತ್ತು. ಅದಕ್ಕಾಗಿಯೇ ಪಂಚಮರು ಮತ್ತು ಹಿಂದುಳಿದ ವರ್ಗಗಳ ಮಕ್ಕಳಿಗಾಗಿ ವಿಶೇಷ ಸೌಲಭ್ಯ ಒದಗಿಸುವತ್ತ ಸರ್ಕಾರ ಕಾಳಜಿ ವಹಿಸಿತು. 1890 ರಲ್ಲಿ 10 ನೇ ಚಾಮರಾಜ ಒಡೆಯರ ಆಳ್ವಿಕೆಯಲ್ಲಿ ಪಂಚಮರ ಮಕ್ಕಳಿಗಾಗಿ ಮೈಸೂರು ನಗರದಲ್ಲಿ ಸರ್ಕಾರ ಶಾಲೆಯೊಂದನ್ನು ಸ್ಥಾಪಿಸಿತು. ಈ ಶಾಲೆ ನಗರದಲ್ಲಿರುವ ಪಂಚವರ ಮಕ್ಕಳಿಗೆ ಅನುಕೂಲವಾಗಿದ್ದುದು ಸರಿ. ಆದರೆ ನಗರದ ಹೊರಗಿರುವ ಹಾಗೂ ಗ್ರಾಮೀಣ ಪ್ರದೇಶದ ಮಕ್ಕಳಿಗೆ ಉಳಿದುಕೊಳ್ಳಲು ವಸತಿ ಸೌಕರ್ಯವಿರಲಿಲ್ಲ. ಈ ಕೊರತೆಯತ್ತ ಚಿತ್ತಹರಿಸಿದ ಮಹಾರಾಜರು 1915 ರಲ್ಲಿ ಇದೇ ಶಾಲೆಯನ್ನು ವಸತಿ ಶಾಲೆಯಾಗಿ ಪರಿವರ್ತಿಸಿದರು. ಈ ಪಂಚಮರ ಶಾಲೆಯ ಮತ್ತೊಂದು ಉಲ್ಲೇಖಾರ್ಹ ಅಂಶವೆಂದರೆ ಇತರೆ ಪ್ರಾಥಮಿಕ ಶಾಲೆಗಳಲ್ಲಿ ಬೋಧಿಸುತ್ತಿದ್ದ ವಿಷಯಗಳ ಜೊತೆಗೆ ಇಲ್ಲಿಯ ಮಕ್ಕಳು ತಮ್ಮ ಶಿಕ್ಷಣವನ್ನು ಮುಗಿಸಿದ ನಂತರ ಮುಂದೆ ತಮ್ಮ ಜೀವನ ನಿರ್ವಹಣೆಗೆ ತೊಡಗಿಕೊಳ್ಳಲು ಅನುಕೂಲವಾಗುವಂತೆ ವೃತ್ತಿಪರ ಶಿಕ್ಷಣವನ್ನು ನೀಡಲಾಯಿತು. ಚಾಪೆ ಮತ್ತು ಬುಟ್ಟಿ ಹೆಣೆಯುವುದು. ಚರ್ಮದ ಕೆಲಸ, ತೋಟಗಾರಿಗೆ, ಹೊಲಿಗೆ ಇತ್ಯಾದಿ ವೃತ್ತಿಪರ ಶಿಕ್ಷಣದ ತರಬೇತಿಯನ್ನೂ ಕೊಡಲಾರಂಭಿಸಿರು.

ನಾಲ್ವಡಿಯವರ ಸರ್ಕಾರ ಇಷ್ಟೇಲ್ಲಾ ಕಾಳಜಿಯಿಂದ ಪಂಚಮರ ಮಕ್ಕಳನ್ನು ಶಾಲೆಗೆ ಆಕರ್ಷಿಸಲು ಪ್ರಯತ್ನಿಸಿದರೂ ನಿರೀಕ್ಷಿತ ಪ್ರಮಾಣದಲ್ಲಿ ಸಾಧ್ಯವಾಗಲಿಲ್ಲ. ಪೋಷಕರು ಮಕ್ಕಳನ್ನು ಶಾಲೆಗೆ ಕಳುಹಿಸುವ ಆಸಕ್ತಿ ತೋರಲಿಲ್ಲ. ಕಡ್ಡಾಯ-ಉಚಿತ (ವಸತಿ ಹಾಗೂ ಶಿಕ್ಷಣ) ಇದ್ದರೂ ಪೋಷಕರು ತಮ್ಮ ಮಕ್ಕಳನ್ನು ಕೂಲಿಗೆ ಕರೆದೊಯ್ಯುತ್ತಿದ್ದರು. ಅವರನ್ನು ಶಾಲೆಗೆ ಕಳುಹಿಸಿದ್ದಲ್ಲಿ ಕೌಟಂಬಿಕ ನಿರ್ವಹಣೆ ಕಷ್ಟವಾಗುತ್ತಿದ್ದುದರ ಹಿನ್ನಲೆಯಲ್ಲಿ ಮಕ್ಕಳನ್ನು ಕೂಲಿಗೆ ಕರೆದೊಯ್ಯುವ ಅನಿವಾರ್ಯತೆ ಅವರಿಗಿತ್ತು. ಈ ವ್ಯತಿರಿಕ್ತ ಪರಿಸ್ಥತಿ ಮಹಾರಾಜ ಸರ್ಕಾರಕ್ಕೆ ಒಚಿದು ಸವಾಲಾಗಿತ್ತು. ಪರಿಹಾರ ಕಂಡುಕೊಂಡ ಶಿಕ್ಷಣ ಇಲಾಖೆ ಆ ವರ್ಗದ ಪೋಷಕರಿಗೆ ತಾವು ಶಾಲೆಗೆ ಕಳುಹಿಸುವ ಒಂದು ಮಗುವಿಗೆ ಇಂತಿಷ್ಟು ಸಂಭಾವನೆ ಎಂಬುದನ್ನು ನಿಗಧಿಪಡಿಸಿ, ಅವರು ಶಾಲೆಗೆ ಕಳುಹಿಸುವ ಪ್ರತೀ ಮಗುವಿಗೂ ಸಂಭಾವನೆನ್ನು ಘೋಷಿಸಿತು. ಈ ಯೋಜನೆ ಪಂಚಮರ ಮಕ್ಕಳಿಗೆ ಪ್ರಾಥಮಿಕ ಶಿಕ್ಷಣ ನೀಡಲು ತುಂಬಾ ಸಹಕಾರಿಯಾಯಿತು. ಸ್ವಾಮಿ ವಿವೇಕಾನಚಿದರು ಹೇಳಿರುವ " If people do not take to education, education has to go to them" ಮಾತಿಗೆ ಅನ್ವರ್ಥವಾಗಿ ನಾಲ್ವಡಿ ಮಹಾರಾಜರು ಅಕ್ಷರಶಃ ಎಲ್ಲಾ ವರ್ಗದ ಮಕ್ಕಳಿಗೂ ಶಿಕ್ಷಣ ತಲುಪುವಂತೆ ಮಾಡಿದರು. ಮುಂದುವರಿದು ಇದೇ ವರ್ಗದ ಮಕ್ಕಳಿಗೆ ಆಂಗ್ಲಭಾಷೆಯನ್ನು ಒಂದು ವಿಷಯವಾಗಿ ಕಲಿಸುವ ಇಚ್ಚೆಯಿಂದ ವಿಶೇಷ ಸವಲತ್ತೊಂದನ್ನು ಘೋಷಿಸಿತು ಸರ್ಕಾರ ಅದೇನೆಂದರೆ ಆಂಗ್ಲಭಾಷೆಯನ್ನು ಕಲಿಯಲು ಮುಂದೆ ಬರುವ ವಿದ್ಯಾರ್ಥಿಗೆ ವಿಶೇಷ ವಿದ್ಯಾರ್ಥಿ ವೇತನವನ್ನು ಘೋಷಿಸಿತು. ಇದಿಷ್ಟೆ ಅಲ್ಲದೆ 1919 ರಲ್ಲಿ ಸರ್ಕಾರ ಕೈಗೊಂಡ ಮಹತ್ತರವಾದ ತಿರ್ಮಾನವೆಂದರೆ ಪಂಚಮರ ಮಕ್ಕಳು ರಾಜ್ಯದ ಎಲ್ಲಾ ಸರ್ಕಾರಿ ಹಾಗೂ ಅನುದಾನಿತ ಶಾಲೆಗಳಲ್ಲಿ ಪ್ರವೇಶ ಪಡೆಯಲು ಅವಕಾಸ ಒದಗಿಸಿದುದು, ಮಹರಾಜರ ಸರ್ಕಾರದ ಈ ತಿರ್ಮಾನ ಸಾವ್ರತ್ರಿಕ ಶಿಕ್ಷಣದ ಮಹದಾಶಯವನ್ನು ಪೂರ್ಣಗೊಳಸುವಲ್ಲಿ ಪ್ರಮುಖವಾದ

ಹೆಚ್ಚೆಯಾಯಿತು. ಈ ಎಲ್ಲಾ ಸವಲತ್ತುಗಳನ್ನು ಹಿಂದುಳಿದ ವರ್ಗಗಳ ಮಕ್ಕಳಿಗೂ ಸರ್ಕಾರ ಕಲ್ಪಿಸಿತು.

ಮಹರಾಜರಿಗೆ ಬಾಲ್ಯದಲ್ಲೆ ದೊರೆತಿದ್ದ ಆಧುನಿಕ ಶಿಕ್ಷಣದ ಪ್ರಭಾವದಿಂದಾಗಿ ಅವರಿಗೆ ತಮ್ಮ ಪ್ರಜೆಗಳು ಆಂಗ್ಲಭಾಷೆಯನ್ನು ಕಲಿಯುವಲ್ಲಿ ಹಿಂದುಳಿಯಬಾರದೆಂಬ ಮನೋಭಾವವಿತ್ತು. ಅದಕ್ಕಾಗಿಯೇ ಪ್ರಾಥಮಿಕ ಶಾಲಾ ಹಂತದಲ್ಲಿ ಬೋಧನ ಮಾಧ್ಯಮ ಕನ್ನಡವೇ ಆಗಿದ್ದರು ಮೂರನೇ ತರಗತಿಯಿಂದ ಕಡ್ಡಾಯವಾಗಿ ಆಂಗ್ಲಭಾಷೆಯನ್ನು ಒಂದು ವಿಷಯವಾಗಿ ಕಲಿಯುವಂತೆ ಆದೇಶ ಹೊರಡಿಸಿತು.

ಮಹರಾಜರ ಸರ್ಕಾರ ಉಚಿತ ಹಾಗೂ ಕಡ್ಡಾಯ ಶಿಕ್ಷಣವನ್ನು ಜಾರಿಗೊಳಿಸಿದುದು ಪ್ರಾಥಮಿಕ ಶಾಲಾ ಹಂತಕ್ಕೆ ಮಾತ್ರ. ಆದರೆ ಅಂದು ಮಾಧ್ಯಮಿಕ ಶಾಲಾ ತರಗತಿಗಳು ಕೂಡ ಅದರೊಟ್ಟಿಗೆ ಕಾರ್ಯನಿರ್ವಹಿಸುತ್ತಿದ್ದವು. ವಿದ್ಯಾರ್ಥಿಗಳು ಪ್ರಾಥಮಿಕ ಶಿಕ್ಷಣ ಪೂರೈಸಿದ ಕೂಡಲೆ ಶಾಲೆ ತೆರೆಯುವುದು ಸರ್ವೆ ಸಾಮಾನ್ಯವಾಯಿತು. ಈ ಪರಿಸ್ಥಿತಿ ಸುಧಾರಿಸುವ ಸಲುವಾಗಿ ಉಚಿತ ಶಿಕ್ಷಣದ ಸವಲತ್ತನ್ನು 1919ರಲ್ಲಿ ಮಾಧ್ಯಮಿಕ ಶಾಲಾ ಶಿಕ್ಷಣಕ್ಕು ವಿಸ್ತರಿಸಲಾಯಿತು. 1923ರಲ್ಲಿ ಸರ್ಕಾರ ಪ್ರಥಮಿಕ ಶಾಲಾ ಶಿಕ್ಷಣದಲ್ಲಿ ಸ್ವಲ್ಪ ಮಾರ್ಪಾಡು ಮಾಡಿದುದು ಕಂಡು ಬರುತ್ತದೆ.[5] ಆ ವರ್ಷ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲಾ ತರಗತಿಗಳನ್ನು ಪ್ರತ್ಯೇಕಿಸಿ ಕಾಲಾವಧಿಯಲ್ಲಿ ಬದಲಾವಣೆ ತರಲಾಯಿತು ಆ ಪ್ರಕಾರ ಇನ್ನು ಮುಂದೆ ನಾಲ್ಕು ವರ್ಷಗಳ ಕಾಲ ಪ್ರಾತಮಿಕ ಶಿಕ್ಷಣವನ್ನು ಮತ್ತೆ ನಾಲ್ಕು ವರ್ಷಗಳ ಮಾಧ್ಯಮಿಕ ಶಾಲಾ ಶಿಕ್ಷಣ ನೀಡಲು ತೀರ್ಮಾನಿಸಲಾಯಿತು. ಮಹಾರಾಜರ ಸಾರ್ವತ್ರಿಕ ಶಿಕ್ಷಣ ಯೋಜನೆ ರಾಜ್ಯದ ಹೆಣ್ಣು ಮಕ್ಕಳ ಪಾಲಿಗೆ ವರದಾನವಾಯಿತು. ಕ್ರೈಸ್ತ ಮಿಷನರಿಗಳು 19ನೇ ಶತಮಾನದ ಮಧ್ಯಭಾಗದಲ್ಲೇ ಹೆಣ್ಣು ಮಕ್ಕಳ ವಿದ್ಯಾಭ್ಯಾಸಕ್ಕೆ ವೇದಿಕೆ ಸಿದ್ದ ಪಡಿಸಿದ್ದರು ಅದು ಸಾರ್ವತ್ರಿಕವಾಗಿರಲಿಲ್ಲ ಹಾಗೂ ಆ ಬಗ್ಗೆ ಜಾಗೃತಿಯು ಮೂಡಿರಲಿಲ್ಲ. 1881ರಲ್ಲಿ ಸಮಾಜ ಸುಧಾರಕ ಅಂಬಿಳೆ ನರಸಿಂಹ ಅಯ್ಯಂಗಾರ್ ಹಾಗೂ ಹಿರಿಯ ಪತ್ರಿಕೋದ್ಯಮಿ ಎಂ ವೆಂಕಟಕೃಷ್ಣಯ್ಯರವರ ಕಾಳಜಿಯಿಂದಾಗಿ ಮೈಸೂರು ನಗರದಲ್ಲಿ ಸ್ಥಾಪಿತವಾದ ಪ್ರಥಮ ಹೆಣ್ಣುಮಕ್ಕಳ 'ಮಹರಾಣಿ ಶಾಲೆ'ಗೆ ಮಹರಾಣಿ ವಾಣಿವಿಲಾಸ ಸನ್ನಿಧಾನರವರ ಆಶಯ ದೊರಕಿತು. ಈ ಶಾಲೆಯು ಹೆಣ್ಣು ಮಕ್ಕಳಿಗೆ ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣವನ್ನು ನೀಡುವಲ್ಲಿ ಮಹತ್ವ ಪಾತ್ರ ವಹಿಸಿತ್ತು. 1991-92 ರಲ್ಲಿ ಈ ಶಾಲೆಯನ್ನು ಪ್ರೌಢಶಾಲಾ ದರ್ಜೆಗೆ ಏರಿಸಲಾಯಿತು.[6] ಮೈಸೂರಿನ ಈ ಶಾಲೆ ಅಂದು ಮಹರಾಜರ ದೇಶ ವಿದೇಶದ ಅತಿಥಿಗಳಿಗೆ ಒಂದು ಪ್ರಮುಖವಾದ ಬೇಟಿಯ ಸ್ಥಳವಾಯಿತು. ಮಹರಾಜರ ಸೋದರ ಮಾವ ಸರ್ದಾರ್ ಕಾತರಾಜೇ ಅರಸ್ ಕೂಡ ಮಹಾರಾಣಿ ಶಾಲೆ ಬಗ್ಗೆ ವಿಶೇಷ ಒಲವು, ಕಾಳಜಿ ಹೊಂದಿದ್ದರು.

1904ರಲ್ಲಿ ಸಾರ್ವಜನಿಕರ ಅನುದಾನದಿಂದ ಮೈಸೂರು ನಗರದಲ್ಲಿ ಆರಂಭವಾದ ಮತ್ತೊಂದು ಹೆಣ್ಣು ಮಕ್ಕಳ ಶಾಲೆ 'ಜಯಲಕ್ಷ್ಮಿ ವಿಲಾಸ ಆರ್ಯಬಾಲಿಕ ಪಾಠಶಾಲೆ' ಈ ಶಾಲೆಯ ಅಭಿವೃದ್ಧಿಗೆ ಸರ್ದಾರ್ ಕಾಂತರಾಜೇ ಅರಸ್ ಆರ್ಥಿಕ ಹಾಗೂ ನೈತಿಕ ಬೆಂಬಲ ತೋರಿದರು ಹಾಗೇಯೆ ಈ ಶಾಲೆ ಶೀಘ್ರವಾಗಿ ಹೆಣ್ಣು ಮಕ್ಕಳ ಶಿಕ್ಷಣ ಪ್ರಸಾರ ಕೇಂದ್ರವಾಗಿ ಬೆಳೆಯಿತು.[7]

ನಾಲ್ವಡಿಯವರ ಕಾಲದಲ್ಲಿ ಸ್ಥಾಪನೆಯಾದ ಮತ್ತೊಂದು ಹೆಣ್ಣು ಮಕ್ಕಳ ಶಾಲೆ ಮೈಸೂರಿನ 'ವಾಣಿವಿಲಾಸ ಅರಸು ಹೆಣ್ಣುಮಕ್ಕಳ ಶಾಲೆ' 20ನೇ ಶತಮಾನದ ಆರಂಭದವರೆಗೂ ರಾಜ ಮನೆತನದ ಹಾಗೂ ಶ್ರೀಮಂತ ಅರಸು ಸಮುದಾಯದ ಹೆಣ್ಣು ಮಕ್ಕಳಿಗೆ ಸಾಂಪ್ರದಾಯಿಕ ಸಂಗೀತ-ನೃತ್ಯ-ಚಿತ್ರಕಲೆಯಂತಹ ಶಿಕ್ಷಣ ನೀಡಲಾಗುತ್ತಿತ್ತು ಆದರೆ ಇದೇ ಸಮುದಾಯಕ್ಕೆ ಸೇರಿದ ಗ್ರಾಮೀಣ ಹೆಣ್ಣು ಮಕ್ಕಳಿಗೆ ಶಿಕ್ಷಣ ಎಂಬುದು ಕನಸಾಗೆ ಉಳಿದಿತ್ತು. 1913ರಲ್ಲಿ ಈ ಕೊರತೆಯನ್ನು ನೀಗಿಸಲು ರಾಜ ಮಾತೆ ವಾಣಿವಿಲಾಸ ಸನ್ನಿಧಾನ ಮಹರಾಜ ನಾಲ್ವಡಿ ಕೃಷ್ಣರಾಜ ಒಡೆಯರು ಹಾಗೂ ಸರ್ದಾರ್ ಎಂ ಕಾಂತರಾಜೇ ಅರಸ್ ಇವರೆಲ್ಲರ ಉದಾರ ಭಾವ ಹಾಗೂ ಪರಿಶ್ರಮದ ಫಲವಾಗಿ ಅಸ್ಥಿತ್ವಕ್ಕೆ ಬಂದುದು 'ವಾಣಿವಿಲಾಸ ಅರಸು ಹೆಣ್ಣು ಮಕ್ಕಳ ಶಾಲೆ' 1913ರ ಏಪ್ರಿಲ್ 11 ರಂದು ಈ ಶಾಲೆ ವಿದ್ಯುಕ್ತವಾಗಿ ಆರಂಭವಾಯಿತು. ಮೊದಲಿಗೆ ಇವಾಲ ರಸ್ತೆಯ ಹೈವ್ಯೂ ಬಂಗಲೆಯಲ್ಲಿ ಶಾಲೆಯನ್ನು ಆರಂಭಿಸಲಾಯಿತು. ಪ್ರಾರಂಭದಲ್ಲಿ ಲೋಯರ್ ಸೆಕಂಡರಿ ತರಗತಿವರೆಗೆ ಶಿಕ್ಷಣ ನೀಡಲಾಗುತ್ತಿತ್ತು. ಆದರೆ ಮೈಸೂರು ನಗರ ಹಾಗೂ ರಾಜ ಮನೆತನದ ಹೆಣ್ಣು ಮಕ್ಕಳಿಗೆ ಶಾಲೆ ಹೆಚ್ಚು ಉಪಯುಕ್ತವಾಯಿತಾದರು ಗ್ರಾಮೀಣ ಪ್ರದೇಶದ ಅರಸು ಸಮುದಾಯದ ಹೆಣ್ಣು ಮಕ್ಕಳ ಪಾಲಿಗೆ ಶಿಕ್ಷಣ ಗಗನ ಕುಸುಮವೆನಿಸಿತು.

ರಾಜಮಾತೆ ಹಾಗೂ ಮಹರಾಜರು ಕೂಡಲೆ ಗ್ರಾಮೀಣ ಪ್ರದೇಶದ ಸಮುದಾಯದ ಹೆಣ್ಣುಮಕ್ಕಳಿಗೆ ಅವಕಾಶ ಒದಗಿಸುವ ಸಲುವಾಗಿ ಶಾಲೆಗೆ ಸೇರಿದಂತೆ ಒಂದು ವಿದ್ಯಾರ್ಥಿನಿಲಯವನ್ನು ಸ್ಥಾಪಿಸಿದರು. ಪರಣಾಮವಾಗಿ ಶಾಲೆಯು ಗ್ರಾಮೀಣ ಪ್ರದೇಶದಲ್ಲಿನ ಸಮುದಾಯದ ಹೆಣ್ಣು ಮಕ್ಕಳನ್ನು ಹೆಚ್ಚು ಹೆಚ್ಚು ಸಂಖ್ಯೆಯಲ್ಲಿ ಆಕರ್ಷಿಸಿತು. ವಿದ್ಯಾರ್ಥಿನಿಯರ ಸಂಖ್ಯೆ ಹೆಚ್ಚವಾದ ಕಾರಣ ಶಾಲೆಯನ್ನು ಹೈವ್ಯೂ ಬಂಗಲೆಯಿಂದ ನಜರಬಾದ್ ರಸ್ತೆಯ ಅರಮನೆ ಬಂಗಲೆಗೆ ಸ್ಥಳಾಂತರಿಸಲಾಯಿತು.

ವಾಣಿ ವಿಲಾಸ ಶಾಲೆಯ ಬಗ್ಗೆ ವಿಶೇಷ ಕಾಳಜಿ ಹೊಂದಿದ್ದ ಮಹರಾಜರು 1917ರ ಜೂನ್ 24 ರಂದು ಶಾಲೆಯ ಬಹುಮಾನ ವಿತರಣ ಸಮಾರಂಭದಲ್ಲಿ ಭಾಷಣ ಮಾಡುತ್ತಾ "ನಮ್ಮ ಅರಸು ಪಂಗಡದ ಸ್ತ್ರೀ ಪುರುಷರನ್ನು ಮುಖ್ಯವಾಗಿ ಸ್ತ್ರೀಯರನ್ನು ತಮ್ಮ ಮಕ್ಕಳಿಗೆ ವಿದ್ಯೆ ಕೊಡಿಸಲು ಎದುರಾಗುವ ಕಷ್ಟಗಳನ್ನು ಸಹಿಸಿಕೊಳ್ಳುವಂತೆ ಕೇಳಿಕೊಳ್ಳುತ್ತೇನೆ." ವಿದ್ಯಾವಂತ ಗಂಡು ಮಕ್ಕಳಿದ್ದರೆ ಸಾಲದು ಸುಶಿಕ್ಷಿತ ಹೆಣ್ಣುಮಕ್ಕಳಿಗೂ ನಮಗೆ ಅವಕಾಶ ಮಹಿಳೆಯರು ವಿದ್ಯೆ ಕಲಿಯದೇ ಮೂಢರಾಗಿರಬಹುದಾದ ಕಾಲ ಹಿಂದೆ ಉಳಿಯಿತು. ಹೆಣ್ಣು ಮಕ್ಕಳನ್ನು ಶಿಕ್ಷಣದಿಂದ ದೂರವಿಡುತ್ತಿದ್ದ ಕಾಲ ಮುಗಿಯಿತು ಒಂದು ಪಂಗಡದಲ್ಲಿ ಹೆಂಗಸರು ವಿದ್ಯಾವತಿಯರಲ್ಲ ಎಂದು ಹೇಳುವ ಕಳಂಕಕ್ಕಿಂತ ಅಧಿಕವಾಗಿ ಕಳಂಕ ಮತ್ತಾವುದು ಇಲ್ಲ. ಅರಸು ಪಂಗಡದವರು ಈ ವಿಚಾರದಲ್ಲಿ ತಮ್ಮ ಜವಬ್ದಾರಿ ಅರಿತುಕೊಂಡು ಕಾಲವನ್ನು ವ್ಯರ್ಥವಾಗಿಸದೇ ಮನುಷ್ಯನಿಗೆ ಪ್ರಾಣದೋಪಾದಿಯಲ್ಲಿರುವ ವಿದ್ಯೆಯನ್ನು ಕಲಿಸುವುದರಲ್ಲಿ ಮುಂದುವರಿಯುವಂತೆ ಕೋರುತ್ತೇವೆ.[8]

ಮಹರಾಜರಿಗೆ ಒಟ್ಟಾರೆ ರಾಜ್ಯದ ಹಾಗೂ ಸಮುದಾಯದ ಹೆಣ್ಣು ಮಕ್ಕಳ ಶಿಕ್ಷಣದ ಬಗ್ಗೆ ಇದ್ದ ಆಶಕ್ತಿಯ ಪರಿಣಾಮವಾಗಿ ಈ ಕ್ಷೇತ್ರದ ಅಭಿವೃದ್ಧಿಗೆ ಕಾರಣವಾಯಿತು. ಅದೇ ರೀತಿ ಸಮುದಾಯದ ಹೆಣ್ಣು ಮಕ್ಕಳ ಶಾಲೆಯ ಬಗೆಗೆ ವಿಶೇಷ ಆಸಕ್ತಿ ಹೊಂದಿದ್ದ ಸರ್ದಾರ್ ಎಂ ಕಾಂತರಾಜೇ ಅರಸ್ ರವರು "ನಮ್ಮ ಸಮುದಾಯದ ಹೆಣ್ಣು ಮಕ್ಕಳು ಕೇವಲ ಉತ್ತಮ ಪತ್ನಿ, ತಾಯಿ ಹಾಗೂ ಸಹೋದರಿಯಾಗಿದ್ದರೆ ಸಾಲದು ಅವರು ನವಭಾರತ ನಿರ್ಮಾಣದಲ್ಲಿ ಪ್ರಮುಖ ಪಾತ್ರ ವಹಿಸುವಂತಾಗಬೇಕು" ಎಂಬುದಾಗಿ ತಮ್ಮ ಆಶಯವನ್ನು ವ್ಯಕ್ತಪಡಿಸಿದರು.[9] ಈ ಶಾಲೆ ರಾಜಾಶ್ರಯ ಪಡೆದಿತ್ತ ಶಾಲೆಯ ಮಕ್ಕಳಿಗೆ ಗೃಹ ವಿಜ್ಞಾನ, ಚಿತ್ರಕಲೆ, ಹಾಡುಗಾರಿಕೆ ವಾದ್ಯ ಸಂಗೀತ ಕಸೂತಿ ಇತ್ಯಾದಿ ವಿಷಯಗಳ ಬೋಧನೆಯ ಜೊತೆಗೆ ಡಂಬಲ್ಸ್, ಬ್ಯಾಡ್‌ಮಿಂಟನ್ ಹಾಗೂ ಟೆನ್ನಿಸ್ ಆಟಗಳನ್ನು ಆಡಿಸುತ್ತಿದ್ದರು. ಕಾಲಕಾಲಕ್ಕೆ ಈ ಶಾಲೆ ಮಕ್ಕಳನ್ನು ಪ್ರಾಣಿ ಸಂಗ್ರಹಾಲಯ, ಚಾಮುಂಡಿ ಬೆಟ್ಟ ಮುಂತಾದ ಸ್ಥಳಗಳಿಗೆ ಪ್ರವಾಸಕ್ಕೆ ಕರೆದುಕೊಂಡು ಹೋಗಲಾಗುತ್ತಿತ್ತು.[10]

1918-19 ಮೈಸೂರು ರಾಜ್ಯದ ಹೆಣ್ಣು ಮಕ್ಕಳ ಶಿಕ್ಷಣದ ಇತಿಹಾಸದಲ್ಲಿ ಒಂದು ಮೈಲಿಗಲ್ಲು ಆ ವರ್ಷ ಮಹರಾಜರ ಸರ್ಕಾರ

ರಾಜ್ಯದ ಗಂಡು ಮಕ್ಕಳಿಗೆ ಒದಗಿಸಿದ್ದ ಕಡ್ಡಾಯ ಹಾಗೂ ಉಚಿತ ಶಿಕ್ಷಣದ ಸೌಲಭ್ಯವನ್ನು ಹೆಣ್ಣು ಮಕ್ಕಳಿಗೂ ವಿಸ್ತರಿಸಿತು ಸರ್ಕಾರ ಆದೇಶ ಹೊರಡಿಸಿ 7-10ವರ್ಷ ವಯೋಮಿತಿಯಲ್ಲಿರುವ ಮೈಸೂರು ಮತ್ತು ಬೆಂಗಳೂರು ನಗರದ ಹೆಣ್ಣು ಮಕ್ಕಳಿಗೆ ಮೊದಲು ಅನ್ವಯಿಸಿತು.[11] ನಂತರ ರಾಜ್ಯಾದ್ಯಂತ ಆ ವಯೋಮಿತಿಯ ಎಲ್ಲಾ ಹೆಣ್ಣು ಮಕ್ಕಳಿಗೂ ಆದೇಶ ಅನ್ವಯವಾಯಿತು ಅದೇ ವರ್ಷ ಅಂದರೆ 1918-19 ರಲ್ಲಿ ಮೈಸೂರಿನಲ್ಲಿನ ನಡೆದ ಮೈಸೂರು ರಾಜ್ಯ ಮಹಿಳಾ ಸಮ್ಮೇಳನದಲ್ಲಿ ಮಹಿಳಾ ಶಿಕ್ಷಣದ ವಿಚಾರವನ್ನು ಚರ್ಚೆ ಮಾಡಲಾಯಿತು. ಅಲ್ಲಿ ಕೈಗೊಂಡ ಮಹತ್ವದ ತೀರ್ಮಾನದಂತೆ ರಾಜ್ಯದಲ್ಲಿ ಗಂಡು ಮತ್ತು ಹೆಣ್ಣು ಮಕ್ಕಳಿಗೆ ಏಕರೀತಿಯ ಶಿಕ್ಷಣ ನೀಡಬೇಕೆಂದು. ಸರ್ಕಾರಕ್ಕೆ ಬೇಡಿಕೆ ಸಲ್ಲಿಸಲಾಯಿತು. ಅವರ ಬೇಡಿಕೆಯನ್ನು ಆದಾರಿಸಿ ಅವರ ಪಠ್ಯಕ್ರಮದಲ್ಲಿ ಸ್ವಲ್ಪಮಟ್ಟಿಗೆ ಬದಲಾವಣೆಯನ್ನು ತರಲಾಯಿತು. 1922ರಲ್ಲಿ ಹೆಣ್ಣು ಮಕ್ಕಳ ಮಾಧ್ಯಮಿಕ ಹಾಗೂ ಪ್ರೌಢಶಾಲ ಪಠ್ಯಕ್ರಮವನ್ನು ಪರಿಷ್ಕರಿಸಿ ಕಡ್ಡಾಯ ಹಾಗೂ ಐಚ್ಚಿಕ ವಿಷಯಗಳ ಕಲಿಕೆಗೆ ಅವಕಾಶ ಮಾಡಿಕೊಡಲಾಯಿತು.

ಹೆಣ್ಣುಮಕ್ಕಳ ಶಾಲೆಗಳ ಸಂಖ್ಯೆ ಹೆಚ್ಚಾದಂತೆ ಅಧ್ಯಾಪಕಿಯರ ಕೊರತೆ ಕಂಡುಬಂದಿತು. ನೀಗಿಸಲು ಅಧ್ಯಾಪಕಿಯರ ತರಬೇತಿಗಾಗಿ ನಾರ್ಮಲ್ ಶಾಲೆಗಳನ್ನು ತೆರೆಯಲಾಯಿತು. ಬೋಧನಾ ವೃತ್ತಿಗೆ ಅವರನ್ನು ಆಕರ್ಷಿಸಲು ಅಧ್ಯಾಪಕರಿಗಿಂತ ಆಧ್ಯಾಪಕಿಯರಿಗೆ ಶೇಕಡ 25ರಷ್ಟು ವೇತನ ಹೆಚ್ಚಿಸಲಾಯಿತು.[12] 1927 ರಲ್ಲಿ ಹೆಣ್ಣು ಮಕ್ಕಳ ಶಿಕ್ಷಣದಲ್ಲಿ ಗುಣಮಟ್ಟ ಹೆಚ್ಚಿಸಲು ಇಲಾಖೆಯು ಕೆಲವು ಕ್ರಮಗಳನ್ನು ಕೈಗೊಂಡಿತು. ಹೆಣ್ಣು ಮಕ್ಕಳ ಶಾಲೆಗಳ ಮೇಲ್ವಿಚಾರಣೆಗಾಗಿ ನಾಲ್ವರು ಮಹಿಳಾ ಸಹಾಯಕ ಇನ್ಸ್ಪೆಕ್ಟರುಗಳನ್ನು ನೇಮಿಸಲಾಯಿತು. ಈ ಅಧಿಕಾರಿಗಳು ಪ್ರತಿ ಮನೆಗೆ ತೆರಳಿ ಹೆಣ್ಣು ಮಕ್ಕಳ ಶಿಕ್ಷಣದ ಬಗ್ಗೆ ಜಾಗೃತಿ ಮೂಡಿಸಬೇಕಿತ್ತು. ಅಧ್ಯಾಪಕಿಯರು ಮತ್ತು ಪೋಷಕರ ಸಭೆ ಕರೆದು ಶಾಲೆಯಿಂದ ಉಳಿದಿರುವ ಹೆಣ್ಣು ಮಕ್ಕಳ ಶಾಲೆಗೆ ಕಳುಹಿಸುವಂತೆ ಮನವಲಿಸುವ ಕಾರ್ಯ ಇವರದಾಗಿತ್ತು. ಈಗೆ ಮಹರಾಜರ ಸರ್ಕಾರ ರಾಜ್ಯದ ಎಲ್ಲಾ ವರ್ಗಗಳ ಎಲ್ಲಾ ಮಕ್ಕಳಿಗೂ ಪ್ರಾಥಮಿಕ ಶಿಕ್ಷಣ ದೊರಕುವಂತೆ ಮಾಡಲು ನಿರಂತರ ಶ್ರಮಿಸಿತು.

1927ರಲ್ಲಿ ಪ್ರಾಥಮಿಕ ಶಿಕ್ಷಣದ ಆಡಳಿತದ ಹೊಣೆಗಾರಿಕೆಯನ್ನು ಸ್ಥಳೀಯ ಮಂಡಳಿಗಳಾದ ಜಿಲ್ಲಾ ಬೋರ್ಡ್‌ಗಳು ಮತ್ತು ಮುನ್ಸಿಪಾಲಿಟಿಗಳ ಅಧೀನಕ್ಕೆ ವರ್ಗಾಯಿಸಿತು. ಆದರೆ ಆರ್ಥಿಕ ಜವಬ್ದಾರಿ ಸರ್ಕಾರದ ನಿಯಂತ್ರಣದಲ್ಲಿತ್ತು. 1929ರಲ್ಲಿ The Eleminatory Education Regulation ಜಾರಿಗೊಳಿಸಿ ಸ್ಥಳೀಯ ಮಂಡಳಿಗಳೆ ಪ್ರಾಥಮಿಕ ಶಿಕ್ಷಣದ ಆರ್ಥಿಕ ಹೊಣೆಗಾರಿಕೆಯನ್ನು ಹಾಗೂ ನಿಯಂತ್ರಣ ಅಧಿಕಾರವನ್ನು ಒಂದಿರಬೇಕೆಂದು ತಿಳಿಸಿತು. ಶಿಕ್ಷಣ ಇಲಾಖೆಯು ಶೈಕ್ಷಣಿಕ ನೀತಿ ಮತ್ತು ಮೇಲ್ವಿಚಾರಣ ಜವಬ್ದಾರಿಯನ್ನು ಇಟ್ಟುಕೊಳ್ಳಬೇಕೆಂದು ಕಾಯ್ದೆ ಉಲ್ಲೇಕಿಸಿತು.[13]

ನೂತನ ಕಾಯ್ದೆಯು 1931ರ ಜನವರಿ 1 ರಂದು ಕಾರ್ಯ ರೂಪಕ್ಕೆ ಬಂದಿತು ಹೊಸ ವ್ಯವಸ್ಥೆಯಡಿ ಸುಲಲಿತ ಶೈಕ್ಷಣಿಕ ಆಡಳಿತ ನಿರ್ವಹಣೆಗಾಗಿ ಸರ್ಕಾರ 12 ಮಂದಿ ಶಿಕ್ಷಣಾಧಿಕಾರಿಯನ್ನು ನೇಮಿಸಿತು. 8 ಜಿಲ್ಲೆಗಳಿಗೆ ತಲಾ ಒಬ್ಬೊಬ್ಬರು ಅಧಿಕಾರಿಗಳು, ಬೆಂಗಳೂರು ಮತ್ತು ಮೈಸೂರು ನಗರಗಳಿಗೆ ಹಾಗೂ ತುಮಕೂರು ಪಟ್ಟಣ ಮತ್ತು ಕೋಲಾರ ಗೋಲ್ಡ್ ಫೀಲ್ಡ್ ಸ್ಯಾನಿಟರಿ ಬೋರ್ಡ್‌ಗಳಿಗೆ ತಲಾ ಒಬ್ಬರಂತೆ ನಾಲ್ವರು ಅಧಿಕಾರಿಗಳು ಒಟ್ಟು 12 ಮಂದಿ ಕಾರ್ಯನಿರತರಾದರು. ಒಟ್ಟಾರೆ ಮಹರಾಜರ ಇಚ್ಛಾಶಕ್ತಿ ಹಾಗೂ ಶಿಕ್ಷಣ ಇಲಾಖೆಯ ಅಧಿಕಾರಿಗಳ ಕ್ರಿಯಾಶಕ್ತಿಯಿಂದಾಗಿ ನಾಲ್ವಡಿಯವರು ಆಳ್ವಿಕೆಯ ಅಂತ್ಯದ ವೇಳೆಗೆ ಮೈಸೂರು ರಾಜ್ಯದಲ್ಲಿ 418 ಹೆಣ್ಣು ಮಕ್ಕಳ ಪ್ರಾಥಮಿಕ ಶಾಲೆಗಳು ಹಾಗೂ 5868 ಗಂಡುಮಕ್ಕಳ ಪ್ರಾಥಮಿಕ ಶಾಲೆಗಳಿದ್ದವು.

**ಆಧುನಿಕ ಶಿಕ್ಷಣ ವ್ಯವಸ್ಥೆ**

19ನೇ ಶತಮಾನದ ಮಧ್ಯಭಾಗದಲ್ಲಿ ಕ್ರೈಸ್ತ ಮಿಷನರಿಗಳ ಪರಿಶ್ರಮದಿಂದಾಗಿ ರಾಜ್ಯದಲ್ಲಿ ಪ್ರೌಢಶಾಲೆಗಳು ಸ್ಥಾಪನೆಯಾದವು ಮೈಸೂರಿನ ಹಾರ್ಡ್ವಿಕ್ ಪ್ರೌಢಶಾಲೆ ರಾಜ್ಯದ ಮೊದಲ ಪ್ರೌಢಶಾಲೆಯೆಂಬ ಹೆಗ್ಗಳಿಕೆಗೆ ಪಾತ್ರವಾಯಿತು. ನಾಲ್ವಡಿ ಮಹರಾಜರು ಅಧಿಕಾರ ಸ್ವೀಕರಿಸಿದ ಸಂದರ್ಭದಲ್ಲಿ ಬೆರಳೆಣಿಕೆಯಷ್ಟು ಖಾಸಗಿ ಹಾಗೂ ಸರ್ಕಾರಿ ಪ್ರೌಢಶಾಲೆಗಳು ವಿದ್ಯಾಧಾನ ಮಾಡುತ್ತಿದ್ದವು.[14] ಬೆಂಗಳೂರು ಪ್ರೌಢಶಾಲೆ[15] ಮರಿಮಲ್ಲಪ್ಪ ಪ್ರೌಢಶಾಲೆ, ಮಹರಾಜ ಪ್ರೌಢಶಾಲೆ, ಮಹಾರಾಣಿ ಮಹಿಳಾ ಪ್ರೌಢಶಾಲೆ[16] ತುಮಕೂರು, ಶಿವಮೊಗ್ಗ, ಹಾಸನನಗಳಲ್ಲಿ ಸ್ಥಾಪಿತವಾದ ಪ್ರೌಢಶಾಲೆಗಳು ಮೆಟ್ರಿಕ್ಯೂಲೇಷನ್ ವರೆಗೆ ಶಿಕ್ಷಣ ಪ್ರಧಾನ ಮಾಡುತ್ತಿದ್ದವು. ನಾಲ್ವಡಿಯವರ ಕಾಲದಲ್ಲಿ 1916ರಲ್ಲಿ ಕೊಳ್ಳೆಗಾಲದಲ್ಲೂ, 1925ರಲ್ಲಿ ನಂಜನಗೂಡಿನಲ್ಲೂ ಸರ್ಕಾರದ ಕಡೆಯಿಂದ ಒಂದೊಂದು ಪ್ರೌಢಶಾಲೆಗಳನ್ನು ಸ್ಥಾಪಿಸಲಾಯಿತು. ಆದರೆ ರಾಜ್ಯದ ಈ ಎಲ್ಲಾ ಪ್ರೌಢಶಾಲೆಗಳೂ ಪಠ್ಯರಚನೆ ಮತ್ತು ಪರೀಕ್ಷೆ ಪದ್ದತಿಯನ್ನು ಮದ್ರಾಸ್ ಪ್ರಾಂತ್ಯದ ಮಾದರಿಯಲ್ಲೇ ನಡೆಸಬೇಕಾಗಿತ್ತು. ಮದ್ರಾಸ್ ವಿಶ್ವವಿದ್ಯಾನಿಲಯ ನಡೆಸುವ ಮೆಟ್ರಿಕ್ಯೂಲೇಷನ್ ಪರೀಕ್ಷೆಯನ್ನು ರಾಜ್ಯದ ಪ್ರೌಢಶಾಲಾ ವಿದ್ಯಾರ್ಥಿಗಳು ತೆಗೆದುಕೊಳ್ಳಬೇಕಿತ್ತು. ಬೋಧನಾ ಮಾಧ್ಯಮ ಆಂಗ್ಲ ಭಾಷೆಯಲ್ಲಿ ಮಾತ್ರ ನಡೆಯುತ್ತಿತ್ತು.

ಮಹಾರಾಜ ನಾಲ್ವಡಿಯವರು ಅಧಿಕಾರಕ್ಕೆ ಬಂದನಂತರ ಪ್ರೌಢಶಾಲಾ ಶಿಕ್ಷಣ ಕ್ಷೇತ್ರದಲ್ಲಿ ಹಲವಾರು ಸುಧಾರಣೆಗಳನ್ನೂ, ಬದಲಾವಣೆಗಳನ್ನೂ ಜಾರಿಗೊಳಿಸಲಾಯಿತು. 1913ರಲ್ಲಿ ಶಿಕ್ಷಣ ಇಲಾಖೆಯು ಪ್ರೌಢಶಾಲಾ ಅಂತಿಮ ವರ್ಷದ ಪರೀಕ್ಷೆಯನ್ನು ಮದ್ರಾಸ್ ಪ್ರಾಂತ್ಯದ ಎಸ್ ಎಸ್ ಎಲ್ ಸಿ ಮಾದರಿಯಲ್ಲಿ ರಾಜ್ಯದ ಶಿಕ್ಷಣ ಇಲಾಖೆಯ ಜವಬ್ದಾರಿಯಲ್ಲೇ ನಡೆಸಿ, ತೇರ್ಗಡೆಯಾದ ವಿದ್ಯಾರ್ಥಿಗಳಿಗೆ ಸೆಕೆಂಡರಿ ಸ್ಕೂಲ್ ಲೀವಿಂಗ್ ಸರ್ಟಿಫಿಕೇಟ್ ಅನ್ನು ಕೊಡಲು ಮಹತ್ವದ ತೀರ್ಮಾನ ಕೈಗೊಂಡಿತು.[17] ಮುಂದುವರಿದು 1930-31ರಲ್ಲಿ ರಾಜ್ಯದ ಎಲ್ಲಾ ಪ್ರೌಢಶಾಲೆಗಳಲ್ಲೂ ಕನ್ನಡ ಮಾಧ್ಯಮದ ತರಗತಿಗಳನ್ನು ತೆರೆಯಲಾಯಿತು. ವಿದ್ಯಾರ್ಥಿಗಳು ಆಂಗ್ಲ ಅಥವಾ ಕನ್ನಡ ಮಾಧ್ಯಮದಲ್ಲಿ ಅಧ್ಯಯನ ಮಾಡಲಿ ಅವಕಾಶ ಕಲ್ಪಿಸಲಾಯಿತು. ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ 1937-38ರಲ್ಲಿ ರಾಜ್ಯದ ಪರಿಸರ ಹಾಗೂ ಸಮಾಜಕ್ಕೆ ಹೊಂದಿಕೆಯಾಗುವಂತಹ ಪಠ್ಯಕ್ರಮವನ್ನು ಪ್ರೌಢಶಾಲ ಶಿಕ್ಷಣದಲ್ಲಿ ಅಳವಡಿಸಲು ಯೋಚಿಸಿದ ಮಹರಾಜರ ಸರ್ಕಾರ ಆ ನಿಟ್ಟಿನಲ್ಲಿ ಕಾರ್ಯೋನ್ಮುಖವಾಯಿತು. ಮೊದಲಿಗೆ ಎಸ್ ಎಸ್ ಎಲ್ ಸಿ ತರಗತಿಗಳ ಪಠ್ಯವನ್ನು ಪರಿಷ್ಕರಿಸಿ ವಿದ್ಯಾರ್ಥಿಗಳಿಗೆ ಕಡ್ಡಾಯ ಮತ್ತು ಐಚ್ಚಿಕ ವಿಷಯಗಳ ಅಧ್ಯಯನಕ್ಕೆ ಅವಕಾಶ ಮಾಡಿಕೊಡಲಾಯಿತು.[18]

ನಾಲ್ವಡಿ ಮಹಾರಾಜರು ತಮ್ಮ ಸೈನ್ಯದಲ್ಲಿ ಸೇವೆ ಸಲ್ಲಿಸುತ್ತಿದ್ದ ಸೈನಿಕರ ಮಕ್ಕಳಿಗೆ ಪ್ರೌಢಶಾಲಾ ಶಿಕ್ಷಣ ನೀಡುವಲ್ಲಿ ತೋರಿದ ವಿಶೇಷ ಕಾಳಜಿ ಗಮನಾರ್ಹ ಕಿರಿಯ ಪ್ರೌಢಶಾಲಾ ಹಂತದಲ್ಲಿ ಅಭ್ಯಾಸ ಮಾಡುತ್ತಿದ್ದ ಸೈನಿಕರ ಮಕ್ಕಳಿಗೆ ಬೋಧನಾ ಶುಲ್ಕದಿಂದ ಪೂರ್ಣ ವಿನಾಯಿತಿ ನೀಡಲಾಯಿತು. ಹಿರಿಯ ಪ್ರೌಢಶಾಲೆಯಲ್ಲಿ ಅಧ್ಯಯನ ಮಾಡುತ್ತಿದ್ದ ಸೈನಿಕರ ಮಕ್ಕಳಿಗೆ ಇತರ ಮಕ್ಕಳಿಗೆ ನಿಗಧಿ ಪಡಿಸಿದ್ದ ಬೋಧನಾ ಶುಲ್ಕದ ಅರ್ಧದಷ್ಟು ಶುಲ್ಕವನ್ನು ಮಾತ್ರನೀಡಬೇಕೆಂದು ತಿಳಿಸಲಾಯಿತು. ಹಾಗಾಗಿ ಸೈನಿಕರ ಮಕ್ಕಳಿಗೆ ಅರ್ಧದಷ್ಟು ಶುಲ್ಕ ವಿನಾಯಿತಿ ದೊರೆತಂತಾಯಿತು. ಅಕಸ್ಮಾತ್ತಾಗಿ ಸೈನಿಕ ಸೇವಾವಧಿಯಲ್ಲಿ ಮೃತನಾದರೆ ಅವನ ಕುಟುಂದ ಎಲ್ಲಾ ಮಕ್ಕಳಿಗೂ ಉಚಿತ ವಿದ್ಯಾಭ್ಯಾಸ ಕೊಡಿಸುವ ಹೊಣೆಗಾರಿಕೆಯನ್ನು ಸರ್ಕಾರ ವಹಿಸಿಕೊಂಡಿತು. ಆ ಮಕ್ಕಳು ಇಚ್ಛೆಪಟ್ಟಷ್ಟು ಶಿಕ್ಷಣ ಹೊಂದುವ ಅವಕಾಶವನ್ನು ಸರ್ಕಾರ ನೀಡಿತ್ತು ಹೀಗೆ ಮಹಾರಾಜರ ಸರ್ಕಾರ ಸೈನಿಕರ ಹಾಗೂ ಅವರ ಕುಟುಂಬದ

ಕ್ಷೇಮಾಭಿವೃದ್ಧಿಯನ್ನು ಪ್ರಮುಖವೆಂದು ಪರಿಗಣಿಸುವುದು ಶ್ಲಾಘನೀಯ.

ಮಹಾರಾಜರ ಸರ್ಕಾರ ಶಾಲಾ ವಿದ್ಯಾರ್ಥಿಗಳ ಬೌದ್ಧಿಕ ಶಿಕ್ಷಣಕ್ಕೆ ಕೊಟ್ಟಷ್ಟೇ ಮಹತ್ವವನ್ನು ಅವರ ದೈಹಿಕ ಶಿಕ್ಷಣಕ್ಕೂ ನೀಡಿದ್ದುದ್ದು ಉಲ್ಲೇಖಾರ್ಹ 1913 ರಲ್ಲಿ ಎಸ್ ಎಸ್ ಎಲ್ ಸಿ ಪಠ್ಯವನ್ನು ಪರಿಷ್ಕರಿಸೊದ ಸಂದರ್ಭದಲ್ಲಿ ಪ್ರಥಮ ಬಾರಿಗೆ ವೇಳಾಪಟ್ಟಿಯಲ್ಲಿ ಡ್ರಿಲ್ ತರಗತಿಯನ್ನು ಅಳವಡಿಸಲಾಯಿತು. ಪ್ರತಿಯೊಬ್ಬ ವಿದ್ಯಾರ್ಥಿಯು ಕ್ರೀಡೆಗೆ ನಿಗಧಿಯಾಗಿದ್ದ ಅವದಿಯಲ್ಲಿ ಕಡ್ಡಾಯವಾಗಿ ಕ್ರೀಡಾ ಮೈದಾನದಲ್ಲಿದ್ದು ಯಾವುದಾದರೊಂದು ಕ್ರೀಡೆಯಲ್ಲಿ ತೊಡಗಿಸಿಕೊಳ್ಳಬೇಕಾಗಿತ್ತು.

ವಿದ್ಯಾರ್ಥಿಗಳ ಹಾಜರಾತಿಯನ್ನು ಕ್ರೀಡಾ ಮೈದಾನದಲ್ಲಿ ತೆಗೆದುಕೊಳ್ಳುವುದರ ಮೂಲಕ ಅವರು ಕ್ರೀಡೆಯಲ್ಲಿ ತೊಡಗಿಕೊಳ್ಳುವಂತೆ ಮಾಡಲಾಗುತ್ತಿತ್ತು. 1937ರಲ್ಲಿ ಎಸ್ ಎಸ್ ಎಲ್ ಸಿ ಪಠ್ಯವನ್ನು ಪುನರ್ ಪರಿಷ್ಕರಣೆ ಮಾಡಿದಾಗ ದೈಹಿಕ ಶಿಕ್ಷಣವನ್ನು ಇತರ ವಿಷಯಗಳಂತೆ ಶಾಲಾ ಕೋರ್ಸ್‌ನ ಒಂದು ಭಾಗವೆಂಬುದಾಗಿ ಪರಿಗಣಿಸಲಾಯಿತು. ದೈಹಿಕ ಶಿಕ್ಷಣ ಬೋಧನೆಗೆ ತರಬೇತು ಹೊಂದಿದ್ದ ಶಿಕ್ಷಕರನ್ನು ನೇಮಿಸಲಾಗುತ್ತಿತ್ತು. ಅವರ ತರಬೇತಿಗಾಗಿ ದೈಹಿಕ ಶಿಕ್ಷಣ ತರಬೇತಿ ಶಾಲೆಯನ್ನು ಸರ್ಕಾರ ಮೈಸೂರಿನಲ್ಲಿ ತೆರೆಯಿತು. ನಾಲ್ವಡಿಯವರ ಕಾಲದಲ್ಲಿ ರಾಜ್ಯಾದ್ಯಂತ ಹನೇರಡು ಸರ್ಕಾರಿ ಹನ್ನೆರಡು ಅನುದಾನ ಎರಡು ಅನುದಾನ ರಹಿತ(ಒಟ್ಟು 26) ಪ್ರೌಢಶಾಲೆಗಳು ಅಸ್ಥಿತ್ವದಲ್ಲಿದ್ದು ಅವುಗಳಲ್ಲಿ 82 ಹೆಣ್ಣು ಮಕ್ಕಳು ಸೇರಿದಂತೆ 8704 ವಿದ್ಯಾರ್ಥಿಗಳು ಅಭ್ಯಾಸ ನಡೆಸುತ್ತಿದ್ದರು.

ಭಾರತದ ವೈಸ್ರಾಯ್ ಲಾರ್ಡ್ ಹಾರ್ಡಿಂಜ್ ಮಹಾರಾಜರ ಆಸ್ಪತ್ರೆಯ ರಜತ ಮಹೋತ್ಸವ ಸಮಾರಂಭಕ್ಕೆ ಮೈಸೂರಿಗೆ ಆಗಮಿಸಿದ್ದನು. ಆತ ಅವರ ಶೈಕ್ಷಣಿಕ ಸುಧಾರಣೆಗಳನ್ನು ಮುಕ್ತ ಮನಸ್ಸಿನಿಂದ ಪ್ರಶಂಸಿಸಿದ್ದಾನೆ. "ಮಹಾರಾಜರು ಉದಾರ ಶೈಕ್ಷಣಿಕ ಕಾರ್ಯಕ್ರಮಗಳಿಗೆ ಅನುಮೋದನೆ ನೀಡುವುದರ ಮೂಲಕ ಪ್ರಾಥಮಿಕ ಶಿಕ್ಷಣಕ್ಕೆ ಮಹತ್ವ ನೀಡಿದ್ದರು. ಶಿಕ್ಷಕರ ನೇಮಕಕ್ಕೆ ಅವರು ಕೈಗೂಡಿರುವ ಯುಕ್ತಮಾನವು ಪ್ರಶಂಸಾರ್ಹ ಪಂಚಮರಿಗೆ ಮೈಸೂರಿನಲ್ಲಿ ಸ್ಥಾಪಿಸಿರುವ ವಸತಿ ಸೌಕರ್ಯ ಅತ್ಯಂತ ಪ್ರಶಂಸಾರ್ಹ ಮಹಾರಾಜರಿಗೆ ಶಿಕ್ಷಣ ಪ್ರಸಾರದ ಬಗೆಗೆ ಇದ್ದ ಕಾಳಜಿಯ ಪರಿಣಾಮವಾಗಿ ಶಿಕ್ಷಣವು ಸಂಸ್ಥಾನದಲ್ಲಿ ಶೀಘ್ರವಾಗಿ ಅಭಿವೃದ್ಧಿ ಹೊಂದುತ್ತಿರುವ ಕ್ಷೇತ್ರವಾಗಿದೆ."[19]

ಒಟ್ಟಾರೆ ಸಮಕಾಲಿನ ದೇಶೀಯ ಸಂಸ್ಥಾನಗಳಿಗೆ ಹೋಲಿಸಿದಾಗ ಮೈಸೂರು ರಾಜ್ಯದಲ್ಲಿ ಶಿಕ್ಷಣಕ್ಕೆ ಮಹಾರಾಜರ ಸರ್ಕಾರ ಅತ್ಯಂತ ಹೆಚ್ಚು ಮಹತ್ವ ನೀಡಿದುದು ಕಂಡುಬರುತ್ತದೆ. ಮೈದಸೂರು ರಾಜ್ಯದಲ್ಲಿ ಗಣನೀಯವಾಗಿ ಶಾಲೆಗಳು ಅಸ್ಥಿತ್ವಕ್ಕೆ ಬಂದುದು, ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ವಿದ್ಯಾರ್ಜನೆ ಮಾಡುತ್ತಿದ್ದುದು ಮಹಾರಾಜರ ಕಾಳಜಿಯ ಪರಣಾಮವೇ ಆಗಿತ್ತು. ತಮ್ಮ ಎಲ್ಲಾ ಪ್ರಜೆಗಳಿಗೂ(ಮಕ್ಕಳಿಗೆ) ಪ್ರಾಥಮಿಕ ಲಭಿಸಲೇಬೇಕೆಂಬ ಅವರ ಆಕಾಂಕ್ಷೆಯೇ, ಈ ಕ್ಷೇತ್ರದಲ್ಲೂಮೈಸೂರು ರಾಜ್ಯ ಮುಂಚೂಣಿಯಲ್ಲಿರಲು ಸಾಧ್ಯವಾಯಿತು.

## ಆಧಾರಸೂಚಿ ಮತ್ತು ಟಿಪ್ಪಣಿಗಳು


1. Suryanth U Kamath (Chief Editor), Mysore District Gazetteer, (Bangalore:1988) P.642
2. M.A.R, 1907-08 P.71.
3. M.A.R 1914-15, P.77, Shamarao M Modern Mysore Part-2 (Bangalore -1936), P-29 Suryanath U Kamath Mysore District Gazetteer, I bid P-642.
4. ದಾಖಲೆಗಳಲ್ಲಿ ಸಂಭಾವನೆಯ ಮೊತ್ತ ತಿಳಿಸಿರುವುದಿಲ್ಲ. ಎಲ್ಲಾ ಮಕ್ಕಳಿಗೂ ಸಮಾನವಾದ ಸಂಭಾವನೆ ನೀಡಲಾಗುತ್ತಿತ್ತು. ಒಂದು ಮನೆಯಲ್ಲಿ ಪ್ರಾಥಮಿಕ ಶಾಲೆಗೆ ಬರುವ 5 ಮಕ್ಕಳಿದ್ದರೆ ಅಷ್ಟು ಮಕ್ಕಳಿಗೂ ಸಮಾನ ಸಂಭಾವನೆಯನ್ನು ಪೋಷಕರಿಗೆ ನೀಡಲಾಗುತ್ತಿತ್ತು.
5. M.A.R 1922-23, P.72; Suryanth U Kamath (Chief Editor) Mysore District Gazetteer, Ibid, P.642.
6. ನಾಲ್ವಡಿಯವರು ರಾಜ್ಯಾಧಿಕಾರ ವಹಿಸಿಕೊಂಡ ವರ್ಷ ಅಂದರೆ 1902ರಲ್ಲಿ ಮಹಾರಾಣಿಶಾಲೆಯನ್ನು ದ್ವಿತೀಯ ದರ್ಜೆ ಕಾಲೇಜಾಗಿಯೂ, 1919ರಲ್ಲಿ ಮಹರಾಣಿ ಪ್ರಥಮ ದರ್ಜೆ ಕಾಲೇಜಾಗಿ ಮೇಲ್ದರ್ಜೆಗೇರಿಸಲಾಯಿತು. ಅಂದು ಈ ಕಾಲೇಜು ದಕ್ಷಿಣ ಭಾರತದ ಪ್ರಥಮ ಸರ್ಕಾರಿ ಮಹಿಳಾ ಕಾಲೇಜೆಂಬ ಹೆಗ್ಗಳಿಕೆಗೆ ಪಾತ್ರವಾಯಿತು.
7. Basavaraj Urs K (Ed), Speeches of Sirdar M Kantaraj Urs, Vol.1 P.148 (Mysore-1953)
8. Speeches of H H Krishnaraja Wodeyar IV, Speech on the occasion of the prize distribution at the Vanivilasa Urs Girls School, Mysore on 24th June, 1917, P.149.
9. Basavaraj Urs K (Ed) Speeches, Ibd, P.25.
10. Vanivilasa Girls School book, PNo.33-6-1919 14th Agust, 1919
11. M.A.R, 1917-18 P.72.
12. Suryanth U Kamath (Chief Editor), Mysore District Gazetteer, (Bangalore:1988) P.642
13. Shamarao M Modern Mysore Ibid P.423,
14. ಖಾಸಗಿ ಹಾಗೂ ಸರ್ಕಾರಿ ಪ್ರೌಢಶಾಲೆಗಳ ಒಟ್ಟು ಸಂಖ್ಯೆ 16 ಇದ್ದು ಅವುಗಳಲ್ಲಿ ಒಟ್ಟು 3435 ವಿದ್ಯಾರ್ಥಿಗಳು ಅಭ್ಯಾಸ ನಡೆಸುತ್ತಿದ್ದರು.
15. 1858 ರಲ್ಲಿ ಸ್ಥಾಪನೆಯಾದ ಬೆಂಗಳೂರು ಪ್ರೌಢಶಾಲೆ 1864ರಲ್ಲಿ ಸೆಂಟ್ರಲ್ ಕಾಲೇಜಿಗಾಗಿ ಮೇಲ್ದರ್ಜೆಗೇರಿತು. 1909ರ ಜನವರಿ 1 ರಂದು ಕಾಲೇಜನ್ನು ಮತ್ತು ಪ್ರೌಢಶಾಲಾ ತರಗತಿಗಳನ್ನು ಪ್ರತ್ಯೇಕಿಸಲಾಯಿತು. ಆಗ ಪ್ರೌಢಶಾಲೆಗೆ ಬೆಂಗಳೂರು ಪ್ರೌಢಶಾಲೆ ಎಂಬುದಾಗಿ ಕರೆಯಲಾಯಿತು.
16. ಮೈಸೂರಿನ ಮಹಾರಾಣಿ ಹೆಣ್ಣುಮಕ್ಕಳ ಶಾಲೆಯು 1891ರಲ್ಲಿ ಪ್ರೌಢಶಾಲಾ ದರ್ಜೆಗೆ ಏರಿತು. ಹೆಣ್ಣು ಮಕ್ಕಳಿಗೆ ಈ ಶಾಲೆಯಲ್ಲಿ ಒಂದೇಕಡೆ ಸೆಕೆಂಡರಿ ಶಿಕ್ಷಣ ನೀಡಲಾಗುತ್ತಿತ್ತು.
17. Suryanth U Kamath (Chief Editor) Karnataka State Gazetteer, Ibid, Part-2 P.545.
18. Proceeding of Mysore Representative Assembly, 1938 No.3179-3240, Education 40-37-10 Dated 28th April. 1938 Bangalore.
19. Srikantaiah S.(Ed) The Sri Krishnaraja Solver Jubilee Souvenir, Viceroy Lord Hordinge,1927, P-27.